# KARNATAKA LOKAYUKTA

No.UPLOK-2/DE/1122/2017/ARE-14

Multi Storied Building,
Dr. B.R. Ambedkar Veedhi,
Bengaluru-560 001,
Dated 02.09.2022.

## RECOMMENDATION

Sub:- Departmental inquiry against (1) Sri.M. Nanjundaswamy, Commercial Tax Officer, Commercial Tax Check Post, Perambadi, Virajpet Taluk, Kodagu District, (2) Sri.H.S.Basavegowda, Commercial Tax Inspector, Commercial Tax Check Post, Perambadi, Virajpet Taluk, Kodagu District, (3) Sri.D.M. Mallikarjuna Swamy, Second Division Clerk, Commercial Tax Check Post, Perambadi, Virajpet Taluk, Kodagu District and (4) Sri.Bhagawan, 'D' Group Employee, Commercial Tax Check Post, Perambadi, Virajpet Taluk, Kodagu District – reg.

Ref:- 1) Government Order No.ಆಇ 8 ವಾತೆತ 2017, Bengaluru, dated 05/09/2017.

2) Corrigendum Order dated 31/01/2018.

3) Nomination order No.UPLOK-2/DE/ 1122/2017, dated 29.11.2017 of the Upalokayukta, State of Karnataka.

4) Inquiry report dated 29.08.2022 of Additional Registrar of Enquiries-14, Karnataka Lokayukta, Bengaluru.

****

The Government by its order dated 05-09-2017 and corrigendum order dated 31-01-2018 initiated the disciplinary proceedings against (1) Sri.M. Nanjundaswamy, Commercial Tax Officer, Commercial Tax Check Post, Perambadi, Virajpet Taluk, Kodagu District, (2) Sri.H.S.Basavegowda, Commercial Tax Inspector, Commercial Tax Check Post, Perambadi, Virajpet Taluk, Kodagu District, (3) Sri.D.M.Mallikarjuna Swamy, Second Division Clerk, Commercial Tax Check Post, Perambadi, Virajpet Taluk, Kodagu District and (4) Sri.Bhagawan, 'D' Group Employee, Commercial Tax Check Post, Perambadi, Virajpet Taluk, Kodagu District [hereinafter referred to as Delinquent Government Officers/officials, for short as 'DGO Nos.1 to 4'] and entrusted the Departmental Inquiry to this Institution.

2. This Institution by Nomination Order No.UPLOK-2/ DE/1122/2017, dated 29.11.2017, nominated Additional

Registrar of Enquiries-7, Karnataka Lokayukta, Bengaluru, as the Inquiry Officer to frame charges and to conduct departmental inquiry against DGO Nos.1 to 4 for the alleged charge of misconduct, said to have been committed by them. Thereafter by order No.UPLOK-1 & 2/DE/Transfers/2018, dated 06/08/2018, the inquiry was transferred to Additional Registrar of Enquiries-14, Karnataka Lokayukta, Bengaluru, to conduct Departmental inquiry against DGOs.

3. The DGO No.1 Sri.M. Nanjundaswamy, Commercial Tax Officer, Commercial Tax Check Post, Perambadi, Virajpet Taluk, Kodagu District, the DGO No.2 Sri.H.S.Basavegowda, Commercial Tax Inspector, Commercial Tax Check Post, Perambadi, Virajpet Taluk, Kodagu District, the DGO No.3 Sri.D.M.Mallikarjuna Swamy, Second Division Clerk, Commercial Tax Check Post, Perambadi, Virajpet Taluk, Kodagu District and the DGO No.4 Sri.Bhagawan, 'D' Group Employee, Commercial Tax Check Post, Perambadi, Virajpet Taluk, Kodagu District, were tried for the following charge:-

## ANNEXURE-I

## CHARGE

(a) You the DGO., No.1 Sri. M Nanjundaswamy while working as Commercial Tax Officer, Commercial Tax Check Post, Perambadi, Virajpet Taluk, Kodagu District, you the DGO., No.2 Sri. H.S Basavegowda while working as Commercial Tax Inspector, Commercial Tax Check Post, Perambadi, Virajpet Taluk, Kodagu District, you the DGO., No.3 Sri. D.M Mallikarjuna Swamy while working as Second Division Clerk, Commercial Tax Check Post, Perambadi, Virajpet Taluk, Kodagu District and you the DGO., No.4 Sri. Bhagawan while working as 'D' Group Employee, Commercial Tax Check Post, Perambadi, Virajpet Taluk, Kodagu District that on 17/06/2014 at about 4.00 a.m. the Investigating Officer has conducted raid of the Commercial Tax Check Post, Perambadi and on search found excess amount of Rs.1,080/- kept in a rack and thereby you the DGO., Nos.1 to 4 have committed misconduct.

b) Further, you the DGO., No.3 found in possession of excess amount of Rs.850/- as

against the amount declared by you and thereby committed misconduct.

c) Further, excess amount of Rs.1,100/- found in a table drawer and thereby you the DGO., Nos.1 to 4 have committed misconduct.

d) Futher, you the DGO., No.4 found in possession of Rs.2,120 in your pant pocket and thereby committed misconduct.

e) Further, the above said amount was not in respect of tax nor the said amount was declared by you the DGO., Nos.1 to 4 and you the DGO., Nos.1 to 4 have collected the amount as bribe from the vehicle owners and the drivers and thereby committed misconduct.

Thus you the DGO., Nos.1 to 4 have failed to maintain absolute integrity and devotion to duty and committed an act which is unbecoming of the Government servants and thus you have committed misconduct under Rule 3(1)(i) to (iii) of KCS (Conduct) Rules 1966.

4. The Inquiry Officer (Additional Registrar of Enquiries-14) on proper appreciation of oral and documentary evidence has held that, the Disciplinary

Authority has ***'Not proved'*** the above charge against the DGO No.1 Sri.M. Nanjundaswamy, Commercial Tax Officer, Commercial Tax Check Post, Perambadi, Virajpet Taluk, Kodagu District and the DGO No.2 Sri.H.S.Basavegowda, Commercial Tax Inspector, Commercial Tax Check Post, Perambadi, Virajpet Taluk, Kodagu District, and the Disciplinary Authority has ***'proved'*** the above charge against the DGO No.3 Sri.D.M.Mallikarjuna Swamy, Second Division Clerk, Commercial Tax Check Post, Perambadi, Virajpet Taluk, Kodagu District and the DGO No.4 Sri.Bhagawan, 'D' Group Employee, Commercial Tax Check Post, Perambadi, Virajpet Taluk, Kodagu District.

5. On re-consideration of report of inquiry and on perusal of the entire records, I do not find any reason to interfere with the findings recorded by the Inquiry Officer. Therefore, it is hereby recommended to the Government to accept the report of Inquiry Officer.

6. As per the First Oral Statement of DGO Nos.1 to 4, furnished by the Inquiry Officer, DGO No.1 has retired from service on 31.5.2015, DGO No.2 has retired from service on 30.06.2019, DGO No.3 has retired from service on 31.07.2022 and DGO No.4 has retired from service on 31.5.2018.

7. Having regard to the nature of charge ***'Not proved'*** the charge leveled against the DGO No.1 Sri.M. Nanjundaswamy, Commercial Tax Officer, Commercial Tax Check Post, Perambadi, Virajpet Taluk, Kodagu District and the DGO No.2 Sri.H.S.Basavegowda, Commercial Tax Inspector, Commercial Tax Check Post, Perambadi, Virajpet Taluk, Kodagu District, and ***'proved'*** the charge leveled against the DGO No.3 Sri.D.M.Mallikarjuna Swamy, Second Division Clerk, Commercial Tax Check Post, Perambadi, Virajpet Taluk, Kodagu District and the DGO No.4 Sri.Bhagawan, 'D' Group Employee, Commercial Tax Check Post, Perambadi, Virajpet Taluk, Kodagu District, and on consideration of the totality of circumstances:-

i) "It is hereby recommended to the Government to accept the report of Inquiry Officer and to exonerate the DGO No.1 Sri.M.Nanjundaswamy, Commercial Tax Officer, Commercial Tax Check Post, Perambadi, Virajpet Taluk, Kodagu District and the DGO No.2 Sri.H.S.Basavegowda, Commercial Tax Inspector, Commercial Tax Check Post, Perambadi, Virajpet Taluk, Kodagu District.

ii) It is hereby recommended to the Government to impose penalty of withholding 10% of pension payable to the DGO No.3 Sri.D.M.Mallikarjuna Swamy, Second Division Clerk, Commercial Tax Check Post, Perambadi, Virajpet Taluk, Kodagu District, for a period of one year.

iii) It is hereby recommended to the Government to impose penalty of withholding 10% of pension payable to the DGO No.4 Sri.Bhagawan, 'D' Group Employee, Commercial Tax Check Post, Perambadi, Virajpet Taluk, Kodagu District, for a period of one year".

8. Action taken in the matter shall be intimated to this Authority.

Connected records are enclosed herewith.

02/9/22

**(JUSTICE K.N.PHANEENDRA)**
Upalokayukta,
State of Karnataka.

# ಕರ್ನಾಟಕ ಲೋಕಾಯುಕ್ತ

ನಂ.ಉಪಲೋಕ್-2/ಡಿಇ-1122/2017/ಎ.ಆರ್.ಇ-14

ಡಾ॥ ಬಿ.ಆರ್.ಅಂಬೇಡ್ಕರ್ ವೀದಿ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು-560001.
ದಿನಾಂಕ: 29/08/2022.

## ವಿಚಾರಣಾ ವರದಿ

**ಉಪಸ್ಥಿತರು: ಸುದೇಶ್ ರಾಜಾರಾಮ್ ಪರದೇಶಿ,**
ಅಪರ ನಿಬಂಧಕರು ವಿಚಾರಣೆಗಳು-14,
ಕರ್ನಾಟಕ ಲೋಕಾಯುಕ್ತ, ಬೆಂಗಳೂರು.

**ವಿಷಯ:** ಆ.ಸ.ನೌಕರ – (1) ಶ್ರೀ. **ಎಂ ನಂಜುಂಡಸ್ವಾಮಿ,** ವಾಣಿಜ್ಯ ತೆರಿಗೆ ಅಧಿಕಾರಿಗಳು, ವಾಣಿಜ್ಯ ತೆರಿಗೆ ತನಿಖಾ ಠಾಣೆ, ಪೆರಂಬಾಡಿ, ವಿರಾಜಪೇಟೆ ತಾಲ್ಲೂಕು, ಕೊಡಗು ಜಿಲ್ಲೆ (2) ಶ್ರೀ. **ಹೆಚ್.ಎಸ್ ಬಸವೇಗೌಡ,** ವಾಣಿಜ್ಯ ತೆರಿಗೆ ಪರಿವೀಕ್ಷಕರು, ವಾಣಿಜ್ಯ ತೆರಿಗೆ ತನಿಖಾ ಠಾಣೆ, ಪೆರಂಬಾಡಿ, ವಿರಾಜಪೇಟೆ ತಾಲ್ಲೂಕು, ಕೊಡಗು ಜಿಲ್ಲೆ (3) ಶ್ರೀ. **ಡಿ.ಎಂ ಮಲ್ಲಿಕಾರ್ಜುನಸ್ವಾಮಿ,** ದ್ವಿತೀಯ ದರ್ಜೆ ಸಹಾಯಕರು, ವಾಣಿಜ್ಯ ತೆರಿಗೆ ತನಿಖಾ ಠಾಣೆ, ಪೆರಂಬಾಡಿ, ವಿರಾಜಪೇಟೆ ತಾಲ್ಲೂಕು, ಕೊಡಗು ಜಿಲ್ಲೆ ಮತ್ತು (4) ಶ್ರೀ. **ಭಗವಾನ್,** ಡಿ ಗ್ರೂಪ್ ನೌಕರ, ವಾಣಿಜ್ಯ ತೆರಿಗೆ ತನಿಖಾ ಠಾಣೆ, ಪೆರಂಬಾಡಿ, ವಿರಾಜಪೇಟೆ ತಾಲ್ಲೂಕು, ಕೊಡಗು ಜಿಲ್ಲೆ ಇವರುಗಳ ವಿರುದ್ಧದ ಇಲಾಖಾ ವಿಚಾರಣೆ ಕುರಿತು.

**ಉಲ್ಲೇಖ:**

1. ಕಂಪ್ಲೆಂಟ್/ಉಪಲೋಕ್/ಎಂವೈಎಸ್/394/2017/ಡಿ.ಆರ್.ಇ-4 ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(3) ರನ್ವಯ ವರದಿ ದಿನಾಂಕ: 10/07/2017.
2. ಸರ್ಕಾರದ ಆದೇಶ ಸಂಖ್ಯೆ: ಆಇ 8 ವಾತೆತ 2017, ಬೆಂಗಳೂರು, ದಿನಾಂಕ: 05/09/2017.
3. ಸರ್ಕಾರದ ತಿದ್ದುಪಡಿ ಆದೇಶ ಸಂಖ್ಯೆ: ಆಇ 8 ವಾತೆತ 2007, ಬೆಂಗಳೂರು, ದಿನಾಂಕ: 31/01/2018.
4. ನಾಮನಿರ್ದೇಶನ ಸಂಖ್ಯೆ:ಉಪಲೋಕ್-2/ಡಿಇ/1122/2017, ಬೆಂಗಳೂರು ದಿನಾಂಕ: 29/11/2017.
5. Order No.UPLOK-1&2/DE/Transfers/2018

Bengaluru, Dtd: 06/08/2018 file is transferred from ARE-7 to ARE-14.

* * * * * *

ಮಾನ್ಯ ಅಪರ ಪೋಲಿಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ಕೊಡಗು ಲೋಕಾಯುಕ್ತ ಪೋಲಿಸ್ ನಿರೀಕ್ಷಕರು (ಇನ್ನು ಮುಂದೆ "ತನಿಖಾಧಿಕಾರಿ" ಎಂದು ಕರೆಯಲ್ಪಡುತ್ತಾರೆ) ಸಲ್ಲಿಸಿದ ತನಿಖಾ ವರದಿಯನ್ನು ಸಂಬಂಧಿಸಿದ ದಾಖಲೆಗಳೊಂದಿಗೆ ಸಲ್ಲಿಸಿದ್ದು, ಸದರಿ ವರದಿಯನ್ವಯ (1) **ಶ್ರೀ. ಎಂ ನಂಜುಂಡಸ್ವಾಮಿ,** ವಾಣಿಜ್ಯ ತೆರಿಗೆ ಅಧಿಕಾರಿಗಳು, ವಾಣಿಜ್ಯ ತೆರಿಗೆ ತನಿಖಾ ಠಾಣೆ, ಪೆರಂಬಾಡಿ, ವಿರಾಜಪೇಟೆ ತಾಲ್ಲೂಕು, ಕೊಡಗು ಜಿಲ್ಲೆ (2) **ಶ್ರೀ. ಹೆಚ್.ಎಸ್ ಬಸವೇಗೌಡ,** ವಾಣಿಜ್ಯ ತೆರಿಗೆ ಪರಿವೀಕ್ಷಕರು, ವಾಣಿಜ್ಯ ತೆರಿಗೆ ತನಿಖಾ ಠಾಣೆ, ಪೆರಂಬಾಡಿ, ವಿರಾಜಪೇಟೆ ತಾಲ್ಲೂಕು, ಕೊಡಗು ಜಿಲ್ಲೆ (3) **ಶ್ರೀ. ಡಿ.ಎಂ ಮಲ್ಲಿಕಾರ್ಜುನಸ್ವಾಮಿ,** ದ್ವಿತೀಯ ದರ್ಜೆ ಸಹಾಯಕರು, ವಾಣಿಜ್ಯ ತೆರಿಗೆ ತನಿಖಾ ಠಾಣೆ, ಪೆರಂಬಾಡಿ, ವಿರಾಜಪೇಟೆ ತಾಲ್ಲೂಕು, ಕೊಡಗು ಜಿಲ್ಲೆ ಮತ್ತು (4) **ಶ್ರೀ. ಭಗವಾನ್,** ಡಿ ಗ್ರೂಪ್ ನೌಕರ, ವಾಣಿಜ್ಯ ತೆರಿಗೆ ತನಿಖಾ ಠಾಣೆ, ಪೆರಂಬಾಡಿ, ವಿರಾಜಪೇಟೆ ತಾಲ್ಲೂಕು, ಕೊಡಗು ಜಿಲ್ಲೆ (ಇನ್ನು ಮುಂದೆ ಆಪಾದಿತ ಸರ್ಕಾರಿ ನೌಕರ "ಆ.ಸ.ನೌ" ಎಂದು ಕರೆಯಲ್ಪಡುತ್ತಾರೆ) ರವರು ಸರ್ಕಾರಿ ಕೆಲಸಕ್ಕೆ ಲಂಚದ ಹಣವನ್ನು ಪಡೆದು ಕರ್ತವ್ಯ ಲೋಪ ಎಸಗಿರುವುದು ಕಂಡು ಬಂದಿದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 7(2) ರನ್ವಯ ಸ್ವಯಂ ಪ್ರೇರಿತ ದೂರು ದಾಖಲಿಸಿಕೊಂಡು, ತನಿಖೆಯನ್ನು ಕೈಗೊಂಡಿದ್ದು ಇರುತ್ತದೆ.

2. ತನಿಖೆ ಪೂರ್ಣಗೊಂಡ ನಂತರ, ಸರ್ಕಾರಕ್ಕೆ ಕರ್ನಾಟಕ ಲೋಕಾಯುಕ್ತ ಅಧಿನಿಯಮದ ಕಲಂ 12(3)ರಡಿಯಲ್ಲಿ ಉಲ್ಲೇಖ (1)ರಲ್ಲಿ ಕಾಣಿಸಿದಂತೆ, ವರದಿ ಸಲ್ಲಿಸಿದ್ದು, ಸದರಿ ವರದಿಯನ್ವಯ ಕರ್ನಾಟಕ ಸರ್ಕಾರವು ಉಲ್ಲೇಖ (2) ಮತ್ತು (3) ರಲ್ಲಿ ಕಾಣಿಸಿದಂತೆ, ದಿನಾಂಕ: 05/09/2017ರ ಆದೇಶ ಮತ್ತು ದಿನಾಂಕ: 31/01/2018ರ ತಿದ್ದುಪಡಿ ಆದೇಶದಂತೆ, ಮಾನ್ಯ ಉಪಲೋಕಾಯುಕ್ತ ರವರಿಗೆ ವಿಚಾರಣೆ ಮಾಡಿ ವರದಿ ಸಲ್ಲಿಸುವಂತೆ ಕೋರಿದ್ದು, ಮಾನ್ಯ ಉಪಲೋಕಾಯುಕ್ತ ರವರು ದಿನಾಂಕ: 29/11/2017 ರಂದು ಅಪರ ನಿಬಂಧಕರು, ವಿಚಾರಣೆಗಳು-7 ರವರಿಗೆ ವಿಚಾರಣೆ

ಮಾಡಿ, ವರದಿ ಸಲ್ಲಿಸುವಂತೆ ಉಲ್ಲೇಖ (3)ರಲ್ಲಿ ಕಾಣಿಸಿದಂತೆ ನಾಮನಿರ್ದೇಶನ ಮಾಡಿದ್ದು, ಉಲ್ಲೇಖ (4) ರಂತೆ ಅಪರ ನಿಬಂಧಕರು ವಿಚಾರಣೆಗಳು–7 ರವರಿಂದ ಈ ಕಡತ ಅಪರ ನಿಬಂಧಕರು ವಿಚಾರಣೆಗಳು–14 ರವರಿಗೆ ವರ್ಗಾವಣೆಗೊಂಡಿರುತ್ತದೆ.

3. ನಾಮನಿರ್ದೇಶನದ ಆದೇಶದಂತೆ, ಆ.ಸ.ನೌ ರವರುಗಳ ವಿರುದ್ಧ ದೋಷಾರೋಪಣೆ ***(Articles of Charge)*** ಅನ್ನು ಅಪರ ನಿಬಂಧಕರು ವಿಚಾರಣೆಗಳು–7 ರವರು ರಚಿಸಿದ್ದು, ಸದರಿ ದೋಷಾರೋಪಣೆಯು ಅನುಬಂಧ–1 ಮತ್ತು ಅನುಬಂಧ–2 ರೊಂದಿಗೆ ದುರ್ನಡತೆ ಮತ್ತು ಕರ್ತವ್ಯಲೋಪಕ್ಕೆ ಸಂಬಂಧಪಟ್ಟಂತೆ, ವಿವರಗಳುಳ್ಳ ಆರೋಪವನ್ನು ಆ.ಸ.ನೌರವರಿಗೆ ದಿನಾಂಕ: 27/07/2018 ರಂದು ಈ ಕೆಳಕಂಡಂತೆ ಕಳುಹಿಸಲಾಗಿರುತ್ತದೆ.

## ಅನುಬಂಧ–1

## ದೋಷಾರೋಪಣೆ

2. (a) You the DGO., No.1 Sri. M Nanjundaswamy while working as Commercial Tax Officer, Commercial Tax Check Post, Perambadi, Virajpet Taluk, Kodagu District, you the DGO., No.2 Sri. H.S Basavegowda while working as Commercial Tax Inspector, Commercial Tax Check Post, Perambadi, Virajpet Taluk, Kodagu District, you the DGO., No.3 Sri. D.M Mallikarjuna Swamy while working as Second Division Clerk, Commercial Tax Check Post, Perambadi, Virajpet Taluk, Kodagu District and you the DGO., No.4 Sri. Bhagawan while working as 'D' Group

Employee, Commercial Tax Check Post, Perambadi, Virajpet Taluk, Kodagu District that on 17/06/2014 at about 4.00 a.m. the Investigating Officer has conducted raid of the Commercial Tax Check Post, Perambadi and on search found excess amount of Rs.1,080/- kept in a rack and thereby you the DGO., Nos.1 to 4 have committed misconduct.

b) Further, you the DGO., No.3 found in possession of excess amount of Rs.850/- as against the amount declared by you and thereby committed misconduct.

c) Further, excess amount of Rs.1,100/- found in a table drawer and thereby you the DGO., Nos.1 to 4 have committed misconduct.

d) Futher, you the DGO., No.4 found in possession of Rs.2,120 in your pant pocket and thereby committed misconduct.

e) Further, the above said amount was not in respect of tax nor the said amount was declared by you the DGO., Nos.1 to 4 and you the DGO., Nos.1 to 4 have collected the amount as bribe from the vehicle owners and the drivers and thereby committed misconduct.

3. Thus you the DGO., Nos.1 to 4 have failed to maintain absolute integrity and devotion to duty and committed an act which is unbecoming of the Government servants and thus you have committed misconduct under Rule 3(1)(i) to (iii) of KCS (Conduct) Rules 1966.

## ಅನುಬಂಧ–2

## ದೋಷಾರೋಪಣೆಯ ವಿವರ

## (ಸ್ಟೇಟ್‌ಮೆಂಟ್ ಆಫ್ ಇಂಪ್ಯೂಟೇಷನ್ ಆಫ್ ಮಿಸಕಾಂಡೆಕ್ಟ್)

4. On the basis of a report of the Additional Director General of Police, Karnataka Lokayukta, Bengaluru filed investigation report made by the Police Inspector, Karnataka Lokayukta, Kodagu (hereinafter referred to as Investigating Officer – 'I.O.' for short), reveals that the DGOs, by name (1) Sri. M Nanjundaswamy, Commerical Tax Officer, Commercial Tax Check Post, Perambadi, Virajpet Taluk, Kodagu District (2) Sri. H.S Basavegowda, Commercial Tax Inspector, Commercial Tax Check Post, Perambadi, Virajpet Taluk, Kodagu District (3) Sri. D.M Mallikarjuna Swamy, Second Division Clerk, Commercial Tax Check Post, Perambadi, Virajpet Taluk, Kodagu District and (4) Sri. Bhagawan, 'D' Group Employee, Commercial Tax Check Post, Perambadi, Virajpet Taluk, Kodagu District (hereinafter

referred to as Delinquent Government Officials, in short DGO., Nos.1 to 4) being the Public/Government Servants have committed misconduct and at the time of raid by the I.O. the excess amount found in the rack, table drawer and the DGO., Nos.3 & 4 found in possession of excess amount and an investigation was taken up U/Sec.9 of the Karnataka Lokayukta Act after invoking power vested U/Sec.7(2) of the said Act.

5. **The brief facts of the case:-**

a) The Investigating Officer received credible information about the illegal acts of the DGOs., and thereafter on 11/06/2014 took sanction from the Superintendent of Police, Karnataka Lokayukta, Mysore and received sanction on the very same day. Thereafter on 16/06/2014 the Investigation Officer registered a self complaint on behalf of the Government in the Lokayukta Police Station, Madikeri in Cr.No.1/2014 for the offences punishable under Sec.7, 13(1)(a) of the P.C. Act, 1988 and registered the FIR and sent the FIR to Hon'ble District Special Court and thereafter obtained search warrant from the Hon'ble Court and called two panch witnesses namely (1) Sri. K.K Krishnamurthy,

8-

Shirestedar, o/o the Tahasildar, Madikeri and (2) Sri. J.T Satish, FDA, o/o Tahasildar, Madikeri and on 17/06/2014 at about 4.00 a.m. the Investigation Officer along with panch witnesses and the officials went in a departmental vehicle and conducted raid of the Commercial Tax Check Post, Perambadi and conducted search. During the search excess amount of Rs.1,080/- was found in a rack, the DGO., No.3 found in possession of excess amount of Rs.850/- as against the amount declared. Further, excess amount of Rs.1,100/- was found in a table drawer. The DGO., No.4 found in possession of Rs.2,120/- in his pocket. The said amount was not the tax collected nor the amount declared by the DGOs.

b) The Investigation Officer has seized the amount in the presence of the panch witnesses. The Investigating Officer filed the investigation report after coming to the conclusion that the amount collected by them as bribe from the vehicle owners and drivers.

3) The investigation papers and the materials, on record shows that the DGO., Nos.1 to 4 being public servants

have failed to maintain absolute integrity and devotion to duty and this act is unbecoming of Government servants and thereby have committed an act which amounted to misconduct as stated under Rule 3(1)(i) to (iii) of KCS (Conduct) Rules, 1966.

4) An observation note was sent to the DGO., Nos.1 to 4 and they have submitted the reply and after due consideration found not acceptable. A recommendation was made to the Competent Authority under Section 12(3) of the Karnataka Lokayukta Act, 1984, to initiate Departmental Proceedings against the DGO., Nos.1 to 4 and to entrust the inquiry to this institution under Rule 14-A of KCS (CCA) Rules 1957.

5) The Government after considering the recommendation made in the report, entrusted the matter to the Hon'ble Upalokayukta to conduct Departmental/disciplinary proceedings against the DGO., Nos.1 to 4 and to submit the report. Hence, the charge.

4. ಈ ಮೇಲ್ಕಂಡ ದೋಷಾರೋಪಣೆಯನ್ನು (ಆರ್ಟಿಕಲ್ಸ್ ಆಫ್ ಚಾರ್ಜ್) ಆ.ಸ.ನೌರವರುಗಳಿಗೆ ಕಳುಹಿಸಿದ್ದು, ಅದು ಜಾರಿಯಾದ ನಂತರ ಆ.ಸ.ನೌರವರುಗಳು ದಿನಾಂಕ: 27/10/2018 ರಂದು ಹಾಜರಾಗಿದ್ದು, ಆ.ಸ.ನೌ.ರವರುಗಳ ಪ್ರಥಮ ಮೌಖಿಕ ಹೇಳಿಕೆ, ನಿಯಮ-11 ಕೆ.ಸಿ.ಎಸ್. (ಸಿಸಿಎ)

ರೂಲ್ಸ್ ರ ಅಡಿಯಲ್ಲಿ ದಾಖಲಿಸಲಾಗಿರುತ್ತದೆ. ಆ.ಸ.ನೌರವರುಗಳು ತಪ್ಪೊಪ್ಪಿಕೊಳ್ಳದೆ, ಆರೋಪಗಳ ವಿಚಾರಣೆಯನ್ನು ಮಾಡಬಯಸಿರುತ್ತಾರೆ.

5. ಆ.ಸ.ನೌರವರುಗಳಿಗೆ ದಾಖಲೆಗಳ ಪರಿಶೀಲನೆಗಾಗಿ ಅವಕಾಶ ಕಲ್ಪಿಸಿರುತ್ತದೆ.

6. ಮೇಲ್ಕಂಡ ಆಪಾದನೆಗಳಿಗೆ ಸಂಬಂಧಿಸಿದಂತೆ, ಆ.ಸ.ನೌರವರಿಂದ ಲಿಖಿತ ಹೇಳಿಕೆಯನ್ನು ಕೇಳಲಾಗಿತ್ತು. ಆ.ಸ.ನೌ–1 ರವರು ತಮ್ಮ ಲಿಖಿತ ಹೇಳಿಕೆಯಲ್ಲಿ, ಲೋಕಾಯುಕ್ತ ಪೋಲಿಸರು ತನ್ನ ಬಳಿಯಿಂದ ಯಾವುದೇ ಹಣವನ್ನು ಜಪ್ತಿ ಮಾಡಿರುವುದಿಲ್ಲ. ಲೋಕಾಯುಕ್ತ ಪೋಲಿಸರು ಕಛೇರಿಯ ರ್‍ಯಾಕಿನಿಂದ ರೂ.1,080/– ಗಳನ್ನು ಜಪ್ತಿ ಮಾಡಿಕೊಂಡಿರುವ ವಿಷಯ ತನಗೆ ಗೊತ್ತಿರುವುದಿಲ್ಲ ಅಂತಾ ಹೇಳಿರುತ್ತಾರೆ. ಆದ್ದರಿಂದ ತಾನು ಯಾವುದೇ ಕರ್ತವ್ಯಲೋಪ ಎಸಗಿರುವುದಿಲ್ಲ ಎಂದು ಹೇಳಿರುತ್ತಾರೆ.

7. ಆ.ಸ.ನೌ–2 ರವರು ತಮ್ಮ ಲಿಖಿತ ಹೇಳಿಕೆಯಲ್ಲಿ, ತನ್ನ ಬಳಿಯಿಂದ ಅಕ್ರಮವಾಗಿ ಹಣವನ್ನು ಜಪ್ತಿ ಮಾಡಿರುತ್ತಾರೆ ಅಂತಾ ಆಪಾದಿಸಿರುವುದು ಸತ್ಯಕ್ಕೆ ದೂರುವಾಗಿರುತ್ತದೆ. ಆದರೆ ತಾನು ಆ ದಿವಸ ರೂ.3,850/– ಗಳನ್ನು ಅಧಿಕೃತವಾಗಿ ಘೋಷಣೆ ಮಾಡಿದ್ದು, ತನ್ನ ಹತ್ತಿರ ರೂ.3,250/– ಗಳಿದ್ದು, ಲೋಕಾಯುಕ್ತ ಪೋಲಿಸರು ತನ್ನ ಬಳಿಯಿಂದ ಹೆಚ್ಚಿನ ಹಣವನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ ಅಂತಾ ಹೇಳಿರುತ್ತಾರೆ. ಆದ್ದರಿಂದ, ಯಾವುದೇ ಕರ್ತವ್ಯಲೋಪ ಎಸಗಿರುವುದಿಲ್ಲ ಎಂದು ಹೇಳಿರುತ್ತಾರೆ.

8. ಆ.ಸ.ನೌ–3 ರವರು ತಮ್ಮ ಲಿಖಿತ ಹೇಳಿಕೆಯಲ್ಲಿ, ದೋಷಾರೋಪಣೆಯಲ್ಲಿ ಹೇಳಿದ ಎಲ್ಲಾ ವಿಷಯವು ಸತ್ಯಕ್ಕೆ ದೂರವಾಗಿದ್ದು, ಲೋಕಾಯುಕ್ತ ಪೋಲಿಸರು ದಾಳಿ ಮಾಡಿದಾಗ ತನ್ನ ಬಳಿ ಇದ್ದ ರೂ.650/– ಗಳ ಬಗ್ಗೆ ಅಧಿಕೃತವಾಗಿ ಘೋಷಣೆ ಮಾಡಿದ್ದು, ತನ್ನ ಹತ್ತಿರ ಯಾವುದೇ ಹೆಚ್ಚಿನ ಹಣ ಇರಲಿಲ್ಲ ಅಂತಾ ಹೇಳಿರುತ್ತಾರೆ. ಅಲ್ಲದೇ, ತನ್ನ ಬಳಿ ಇದ್ದ ಹೆಚ್ಚಿನ ಹಣ

ರೂ.165/– ಗಳ ಬಗ್ಗೆ ಲೋಕಾಯುಕ್ತ ಪೋಲಿಸರಿಗೆ ವಿವರಣೆ ನೀಡಿರುತ್ತೇನೆ ಅಂತಾ ಹೇಳಿರುತ್ತಾರೆ. ಆದ್ದರಿಂದ, ಯಾವುದೇ ಕರ್ತವ್ಯಲೋಪ ಎಸಗಿರುವುದಿಲ್ಲ ಎಂದು ಹೇಳಿರುತ್ತಾರೆ.

9. ಆ.ಸ.ನೌ–4 ರವರು ತಮ್ಮ ಲಿಖಿತ ಹೇಳಿಕೆಯಲ್ಲಿ, ದೋಷಾರೋಪಣೆಯಲ್ಲಿ ಹೇಳಿದ ಎಲ್ಲಾ ವಿಷಯವು ಸತ್ಯಕ್ಕೆ ದೂರವಾಗಿದ್ದು, ಆ ದಿವಸ ತಾನು ಕೆಲಸದ ಒತ್ತಡದಿಂದ ತನ್ನ ಹತ್ತಿರವಿದ್ದ ಹಣದ ಬಗ್ಗೆ ನಗದು ಪುಸ್ತಕದಲ್ಲಿ ನಮೂದು ಮಾಡಿರಲಿಲ್ಲ ಅಂತಾ ಹೇಳಿರುತ್ತಾರೆ. ತಾನು ಸದರಿ ಚೆಕ್ ಪೋಸ್ಟ್‌ನಲ್ಲಿ ದಿನದ 24 ಗಂಟೆ ಕೆಲಸ ಮಾಡುತ್ತಿದ್ದರಿಂದ ನಗದು ಪುಸ್ತಕದಲ್ಲಿ ತನ್ನ ಹತ್ತಿರವಿದ್ದ ಹಣದ ಬಗ್ಗೆ ಘೋಷಣೆ ಮಾಡಿರುವುದಿಲ್ಲ ಅಂತಾ ಹೇಳಿರುತ್ತಾರೆ. ಆದ್ದರಿಂದ, ಯಾವುದೇ ಕರ್ತವ್ಯಲೋಪ ಎಸಗಿರುವುದಿಲ್ಲ ಎಂದು ಹೇಳಿರುತ್ತಾರೆ.

10. ಈ ವಿಚಾರಣೆಯಲ್ಲಿ, ಆ.ಸ.ನೌ.ರವರ ವಿರುದ್ಧ ಆರೋಪಿಸಲಾದ ಆರೋಪಕ್ಕೆ ಸಂಬಂಧಿಸಿದಂತೆ, ಶಿಸ್ತು ಪ್ರಾಧಿಕಾರವು ತಮ್ಮ ಪರವಾಗಿ ತನಿಖಾಧಿಕಾರಿಗಳಾದ ಶ್ರೀ. ಬಿ ಪರಶುರಾಮ ಇವರನ್ನು ಪಿ.ಡಬ್ಲ್ಯೂ.1 ಎಂದು ಸಾಕ್ಷ್ಯ ನುಡಿಸಿಕೊಂಡು, ನಿ.ಪಿ.1 ರಿಂದ ನಿ.ಪಿ.13 ರವರೆಗಿನ ದಾಖಲಾತಿಗಳನ್ನು ಗುರುತುಪಡಿಸಿಕೊಂಡಿರುತ್ತಾರೆ. ಶ್ರೀ. ಕೆ.ಕೆ ಕೃಷ್ಣಮೂರ್ತಿ ರವರನ್ನು ಪಿ.ಡಬ್ಲ್ಯೂ.2 ಎಂದು ಸಾಕ್ಷ್ಯ ನುಡಿದಿರುತ್ತಾರೆ. ಆ.ಸ.ನೌ–3 ರವರು ತಮ್ಮನ್ನು ಡಿ.ಡಬ್ಲ್ಯೂ.1 ಎಂದು ತಮ್ಮ ಸಾಕ್ಷಿಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿರುತ್ತಾರೆ. ಆ.ಸ.ನೌ–4 ರವರು ತಮ್ಮನ್ನು ಡಿ.ಡಬ್ಲ್ಯೂ.2 ಎಂದು ತಮ್ಮ ಸಾಕ್ಷಿಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿರುತ್ತಾರೆ. ಆ.ಸ.ನೌ–1 ಮತ್ತು 2 ರವರು ತಮ್ಮ ಸಾಕ್ಷಿಯನ್ನು ಮಾಡಿಸಿರುವುದಿಲ್ಲ.

11. ಉಭಯ ಪಕ್ಷದವರ ಪರವಾಗಿ ವಾದ ವಿವಾದವನ್ನು ಪರಿಶೀಲಿಸಲಾಯಿತು.

12. ಈ ಕೆಳಕಂಡ ಅಂಶಗಳು ನನ್ನ ನಿರ್ಣಯಕ್ಕೆ ಉದ್ಭವಿಸಿರುತ್ತವೆ.

**ಅಂಶ–1:** ವಿಚಾರಣಾ ಪ್ರಾಧಿಕಾರವು ಆ.ಸ.ನೌರವರ ಮೇಲೆ

ಆಪಾದಿಸಲಾದ ಆರೋಪಗಳನ್ನು ರುಜುವಾತುಪಡಿಸಿದೆಯೇ?

**ಅಂಶ-2:** ಆದೇಶವೇನು?

13. ಕಡತವನ್ನು ಪರಿಶೀಲಿಸಲಾಯಿತು ಮತ್ತು ಲಭ್ಯವಿರುವ ಮೌಖಿಕ ಮತ್ತು ದಸ್ತಾವೇಜು ಸಾಕ್ಷ್ಯವನ್ನು ಪರಿಶೀಲಿಸಲಾಯಿತು.

14. ಮೇಲ್ಕಂಡ ಪ್ರಶ್ನೆಗಳಿಗೆ ಕೆಳಗೆ ಚರ್ಚಿಸಿರುವ ಕಾರಣಗಳಿಂದ ಉತ್ತರವು ಈ ಕೆಳಕಂಡಂತಿವೆ.

**ಅಂಶ-1 [2(ಎ)]: ನಕಾರಾತ್ಮಕವಾಗಿ**
**ಅಂಶ-2 [2(ಬಿ ಮತ್ತು ಸಿ)]: ಸಕಾರಾತ್ಮಕವಾಗಿ**
**ಅಂಶ-3 [2(ಡಿ)]: ಸಕಾರಾತ್ಮಕವಾಗಿ**
**ಅಂಶ-4 [2(ಇ)]: ಭಾಗಶಃ ಸಕಾರಾತ್ಮಕವಾಗಿ**
**ಅಂಶ-5:** ಅಂತಿಮ ಆದೇಶದಂತೆ.

## ಕಾರಣಗಳು

15. ಈ ವಿಚಾರಣೆಯಲ್ಲಿ ಕೊಡಗು ಜಿಲ್ಲೆ ವಿರಾಜಪೇಟೆ ತಾಲ್ಲೂಕು ಪೆರಂಬಾಡಿಯಲ್ಲಿರುವ ಕರ್ನಾಟಕ ವಾಣಿಜ್ಯ ತೆರಿಗೆ ತನಿಖಾ ಠಾಣೆಯಲ್ಲಿ ಕರ್ತವ್ಯ ನಿರತ ಅಧಿಕಾರಿ ಮತ್ತು ಸಿಬ್ಬಂದಿಯವರುಗಳು ಕರ್ನಾಟಕದಿಂದ ಕೇರಳ ರಾಜ್ಯಕ್ಕೆ ಹೋಗುವ ಮತ್ತು ಕೇರಳ ರಾಜ್ಯದಿಂದ ಕರ್ನಾಟಕ್ಕೆ ಬರುವ ಸರಕು ಸಾಗಣೆ ವಾಹನಗಳ ಮಾಲೀಕರು ಮತ್ತು ಚಾಲಕರಿಂದ ಅಧೀಕೃತ ಬಿಲ್ಲುಗಳಿರುವವರ ಬಳಿ ನಿಗದಿಗಿಂತ ಹೆಚ್ಚಿನ ಹಣಕ್ಕಾಗಿ ಹಾಗೂ ಅಧೀಕೃತ ಬಿಲ್ಲುಗಳಿಲ್ಲದ ವಾಹನಗಳಿಂದ ಸರಕು ಸಾಗಣೆಯನ್ನು ಮುಂದುವರಿಸಲು ಮೌಖಿಕವಾಗಿ ಅನುಮತಿ ನೀಡಲು ಲಂಚದ ಹಣಕ್ಕಾಗಿ ಒತ್ತಾಯ ಮಾಡಿ ಲಂಚದ ಹಣ ಸಂಗ್ರಹಿಸುತ್ತಾರೆಂದು ಬಂದ ರಹಸ್ಯ ಮಾಹಿತಿ ಮೇರೆಗೆ ಮಡಿಕೇರಿ ಲೋಕಾಯುಕ್ತ ಠಾಣೆಯ ಪೋಲಿಸ್ ನಿರೀಕ್ಷಕರಾದ ಶ್ರೀ. ಬಿ ಪರಶುರಾಮ ರವರು, ಪೋಲಿಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ ಮೈಸೂರು ವಿಭಾಗದಿಂದ ಅನುಮತಿ ಪಡೆದು

ಌ

ಸ್ವಯಂ ದೂರಿನ ಮೇಲೆ ದಿನಾಂಕ: 16/06/2014 ರಂದು ಮೊಕದ್ದಮೆ ನಂ.1/2014 ಕಲಂ 7, 13(1)(ಎ) ಪಿ.ಸಿ. ಕಾಯ್ದೆ 1988 ರಂತೆ ಪ್ರಕರಣ ದಾಖಲಿಸಿಕೊಂಡು, ಸಂಬಂಧಪಟ್ಟ ನ್ಯಾಯಾಲಯದಿಂದ ಶೋಧನಾ ವಾರೆಂಟ್‌ನ್ನು ಪಡೆದುಕೊಂಡು ದಿನಾಂಕ: 17/06/2014 ರಂದು ಪಂಚರ ಸಮಕ್ಷಮ ಕಛೇರಿಯಲ್ಲಿ ಅನಿರೀಕ್ಷಿತ ದಾಳಿ ಮಾಡಿದಾಗ ಕರ್ತವ್ಯದಲ್ಲಿದ್ದವರ ತಪಾಸಣೆ ಮಾಡಿ ಕಛೇರಿಯ ರ್‍ಯಾಕಿನಲ್ಲಿ ಹೆಚ್ಚಿನ ರೂ.1,080/- ದೊರೆತಿದ್ದು, ಆದ್ದರಿಂದ ಆ.ಸ.ನೌ-1 ರಿಂದ 4 ಇವರುಗಳು ಕರ್ತವ್ಯ ಲೋಪ ಎಸಗಿರುತ್ತಾರೆ ಅಲ್ಲದೇ ಹೆಚ್ಚಿನ ರೂ.1,100/- ಹಣ ಕಛೇರಿಯ ಟೇಬಲ್ ಡ್ರಾನಲ್ಲಿ ದೊರೆತಿದ್ದು, ಅದಕ್ಕಾಗಿ ಆ.ಸ.ನೌ-1 ರಿಂದ 4 ಇವರುಗಳು ಕರ್ತವ್ಯ ಲೋಪ ಎಸಗಿರುತ್ತಾರೆ. ಆ.ಸ.ನೌ-3 ಶ್ರೀ. ಡಿ.ಎಂ ಮಲ್ಲಿಕಾರ್ಜುನ ಇವರ ಬಳಿಯಲ್ಲಿ ಘೋಷಿತ ಹಣಕ್ಕಿಂತ ಹೆಚ್ಚಿಗೆ ರೂ.850/- ದೊರೆಕಿದ್ದು ಇರುತ್ತದೆ. ಆ.ಸ.ನೌ-4 ಶ್ರೀ. ಭಗವಾನ್ ಡಿ ಇವರ ಪ್ಯಾಂಟಿನ ಜೇಬಿನಲ್ಲಿ ಅಕ್ರಮವಾಗಿ ಇಟ್ಟುಕೊಂಡಿದ್ದ ರೂ.2,120/- ದೊರೆತಿರುತ್ತವೆ, ಸದರಿ ಹಣವು ಸರ್ಕಾರಿ ಸಾಗಣಿಕ ವಾಹನಗಳಿಂದ ಅಕ್ರಮವಾಗಿ ವಸೂಲಿ ಮಾಡಿರುವ ಲಂಚದ ಹಣವೆಂದು ಪರಿಗಣಿಸಿ ಕ್ರಮ ತೆಗೆದುಕೊಂಡಿರುತ್ತಾರೆ.

16. ಶಿಸ್ತು ಪ್ರಾಧಿಕಾರದ ಪರವಾಗಿ ಮಂಡನಾಧಿಕಾರಿಗಳು ದೂರುದಾರರನ್ನು ಪಿ.ಡಬ್ಲ್ಯೂ.1 ಎಂದು ನುಡಿಸಾಕ್ಷಿ ಮಾಡಿದ್ದು, ತಮ್ಮ ಮುಖ್ಯ ವಿಚಾರಣೆಯಲ್ಲಿ ಶೋಧನಾ ವಾರೆಂಟ್‌ನ್ನು ನ್ಯಾಯಾಲಯದಿಂದ ಪಡೆದುಕೊಂಡ ನಂತರ ದಿನಾಂಕ: 17/06/2014 ರಂದು ಬೆಳಗ್ಗೆ 4 ಗಂಟೆಗೆ ಪಂಚರು ಹಾಗೂ ತಮ್ಮ ಸಿಬ್ಬಂದಿಗಳೊಂದಿಗೆ ಪೆರಂಬಾಡಿಯಲ್ಲಿರುವ ಕರ್ನಾಟಕ ವಾಣಿಜ್ಯ ತೆರಿಗೆ ತನಿಖಾ ಠಾಣೆಯಲ್ಲಿ ದಾಳಿ ಮಾಡಲಾಗಿ ಕರ್ತವ್ಯದಲ್ಲಿದ್ದ ಆ.ಸ.ನೌ-1 ರಿಂದ 4 ಇವರುಗಳನ್ನು ಪರಿಚಯಿಸಿಕೊಂಡು ದಾಳಿ ಮಾಡುತ್ತಿರುವ ಬಗ್ಗೆ ತಿಳಿಸಿ ಮತ್ತು ಶೋಧನಾ ವಾರೆಂಟ್‌ನ್ನು ತೋರಿಸಿ, ಆ.ಸ.ನೌ ರವರುಗಳ ಅಂಗ ಶೋಧನೆ ಹಾಗೂ ಠಾಣೆಯಲ್ಲಿರುವ ದಾಖಲಾತಿಗಳನ್ನು ಪರಿಶೀಲಿಸುತ್ತೇನೆ ಅಂತಾ ನುಡಿದಿರುತ್ತಾರೆ.

17. ಶೋಧನಾ ಪಂಚನಾಮೆ ಕಾಲದಲ್ಲಿ ಅನಧೀಕೃತವಾಗಿ ಹೊಂದಿದ್ದ ಆ.ಸ.ನೌ–2 ರವರ ಸಮೀಪ ದೊರೆತ ನಗದು ಹಣ ರೂ.1,080/–, ಆ.ಸ.ನೌ–3 ರವರ ಬಳಿ ರೂ.1,265/–, ಆ.ಸ.ನೌ–4 ರವರ ಬಳಿ ರೂ.2,120/– ಒಟ್ಟು ರೂ.4,465/– ನಗದು ಹಣವನ್ನು ವಶಕ್ಕೆ ಪಡೆದುಕೊಂಡು ನಗದು ಘೋಷಣಾ ಪುಸ್ತಕ, ರಶೀದಿ ಪುಸ್ತಕ, ಅಧಿಕಾರಿಗಳ ಹಾಜರಾತಿ ಪುಸ್ತಕ, ನಗದು ವಹಿ, ಸ್ವೀಕೃತಿ ಮತ್ತು ರವಾನೆ ಪುಸ್ತಕದ ನಕಲು ಪ್ರತಿಗಳನ್ನು ಬದಲಿ ಪಾಳಗಿಗಾಗಿ ಹಾಜರಾದ ಸಿ.ಟಿ.ಓ ಶ್ರೀ. ಸುರೇಶ್ ರವರಿಂದ ದೃಢೀಕರಿಸಿಕೊಂಡು ಅಮಾನತ್ತು ಪಡಿಸಿಕೊಂಡಿರುತ್ತೇನೆ ಅಂತಾ ನುಡಿದಿರುತ್ತಾರೆ. ದಾಳಿ ಸಮಯದಲ್ಲಿ ಆ.ಸ.ನೌ–1 ರವರ ಬಳಿ ಇದ್ದಂತಹ ಅಧೀಕೃತ ಹಣ ರೂ.7,100/– ಗಳನ್ನು ಶ್ರೀ. ಸುರೇಶ್ ರವರ ವಶಕ್ಕೆ ಕೊಟ್ಟು ಸ್ವೀಕೃತಿಯನ್ನು ಪಡೆದುಕೊಂಡಿರುತ್ತೇನೆ ಅಂತಾ ನುಡಿದಿರುತ್ತಾರೆ. ಶೋಧನಾ ಕಾಲದಲ್ಲಿ ನಗದು ಘೋಷಣಾ ವಹಿಯಲ್ಲಿ ಆ.ಸ.ನೌ–2 ಮತ್ತು 3 ಇವರು ಘೋಷಿಸಿಕೊಂಡಿದ್ದ ನಗದು ಹಣ ತಾಳೆ ಆಗಲಿಲ್ಲ ಮತ್ತು ಆ.ಸ.ನೌ–4 ರವರು ನಗದು ಘೋಷಣೆ ಪುಸ್ತಕದಲ್ಲಿ ನಗದು ಹಣದ ಬಗ್ಗೆ ಘೋಷಿಸಿಕೊಂಡಿರಲಿಲ್ಲ ಅಂತಾ ನುಡಿದಿರುತ್ತಾರೆ. ಈ ಬಗ್ಗೆ ನಿ.ಪಿ.5 ರಂತೆ ಪಂಚನಾಮೆಯನ್ನು ಮಾಡಿದ್ದು, ನಿ.ಪಿ.6 ರಂತೆ ಛಾಯಾಚಿತ್ರಗಳನ್ನು ತೆಗೆದುಕೊಂಡಿರುತ್ತಾರೆ. ನಿ.ಪಿ.7 ರಂತೆ ಸ್ಥಳದ ನಕ್ಷೆಯನ್ನು ತಯಾರಿಸಿಕೊಂಡಿರುತ್ತಾರೆ. ಶೋಧನಾ ಪಂಚನಾಮೆ ಕಾಲಕ್ಕೆ ಆ.ಸ.ನೌ–1 ರಿಂದ 3 ರವರ ಲಿಖಿತ ಸಮಜಾಯಿಷಿಯನ್ನು ಮತ್ತು ಆ.ಸ.ನೌ–4 ರವರ ಹೇಳಿಕೆಯನ್ನು ನಿ.ಪಿ.9 ರಂತೆ ಪಡೆದುಕೊಂಡಿರುತ್ತಾರೆ. ನಿ.ಪಿ.12 ರಂತೆ ಆ.ಸ.ನೌ–1 ರಿಂದ 4 ರವರ ಸೇವಾ ವಿವರವನ್ನು ಪಡೆದುಕೊಂಡಿರುತ್ತಾರೆ ಅಂತಾ ನುಡಿದಿರುತ್ತಾರೆ. ಲೋಕೋಪಯೋಗಿ ಇಲಾಖೆ ಅಧಿಕಾರಿಯಿಂದ ನಿ.ಪಿ.13 ರಂತೆ ಕೃತ್ಯ ಸ್ಥಳದ ನಕ್ಷೆಯನ್ನು ಪಡೆದುಕೊಂಡಿರುತ್ತಾರೆ ಅಂತಾ ನುಡಿದಿರುತ್ತಾರೆ.

18. ಶಿಸ್ತು ಪ್ರಾಧಿಕಾರದ ಪರವಾಗಿ ಮಂಡನಾಧಿಕಾರಿಗಳು ಶ್ರೀ. ಕೆ.ಕೆ ಕೃಷ್ಣಮೂರ್ತಿ ಇವರನ್ನು ಪಿ.ಡಬ್ಲ್ಯೂ.2 ಎಂದು ನುಡಿಸಾಕ್ಷಿ ಮಾಡಿದ್ದು, ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕ: 16/06/2014 ರಂದು ಇವರು ಮಡಿಕೇರಿ ತಾಲ್ಲೂಕು ಕಛೇರಿಯಲ್ಲಿ ಶಿರಸ್ತೇಧಾರರಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾಗ, ತಹಶೀಲ್ದಾರ್ ರವರು ಇವರನ್ನು ಕರೆದು ಲೋಕಾಯುಕ್ತ ಕಛೇರಿಯಿಂದ ಪತ್ರ

ಬಂದಿದ್ದು, ಪಂಚರಾಗಿ ಸಹಕರಿಸಬೇಕೆಂದು ಹೇಳಿದ್ದರ ಮೇರೆ ಸಂಜೆ 5 ಗಂಟೆ ಮಡಿಕೇರಿಯ ಲೋಕಾಯುಕ್ತ ಕಛೇರಿಗೆ ಹೋಗಿರುತ್ತೇನೆ ಅಂತಾ ನುಡಿದಿರುತ್ತಾರೆ. ಇವರ ಜೊತೆಗೆ ಪ್ರ.ದ.ಸ ರಾದ ಶ್ರೀ. ಜೆ.ಟಿ ಸತೀಶ್ ಇವರು ಇದ್ದರು ಅಂತಾ ನುಡಿದಿರುತ್ತಾರೆ. ತನಿಖಾಧಿಕಾರಿಗಳು ಇವರನ್ನು ಮರುದಿನ ಬೆಳಗ್ಗೆ 4 ಗಂಟೆಗೆ ಕಛೇರಿಗೆ ಬರಲು ಹೇಳಿದ್ದು, ಆ ಪ್ರಕಾರ ಮರುದಿನ ಬೆಳಗ್ಗೆ 4 ಗಂಟೆಗೆ ಕಛೇರಿಗೆ ಹೋಗಿದ್ದು, ಅಲ್ಲಿಂದ ಪೆರಂಬಾಡಿಯಲ್ಲಿರುವ ಕರ್ನಾಟಕ ವಾಣಿಜ್ಯ ತೆರಿಗೆ ಚೆಕ್ ಪೋಸ್ಟ್ ಹೋಗಿರುತ್ತೇವೆ ಅಂತಾ ನುಡಿದಿರುತ್ತಾರೆ. ಅಲ್ಲಿ ತನಿಖಾಧಿಕಾರಿಗಳು ಆ.ಸ.ನೌ–1 ರಿಂದ 4 ಇವರನ್ನು ಪರಿಚಯಿಸಿಕೊಂಡು ಅಲ್ಲಿದಂತಹ ನಗದು ಘೋಷಣಾ ಪುಸ್ತಕವನ್ನು ಪರಿಶೀಲಿಸಿರುತ್ತಾರೆ. ಅದನ್ನು ಪರಿಶೀಲಿಸಿದಾಗ ಆ.ಸ.ನೌ–1 ರವರು ತಮ್ಮ ಬಳಿ ರೂ.3,000/– ನಗದು ಇದೆ ಎಂತಲೂ, ಆ.ಸ.ನೌ–2 ಇವರು ತಮ್ಮ ಬಳಿ ರೂ.3,850/– ನಗದು ಇದೆ ಎಂತಲೂ, ಆ.ಸ.ನೌ–3 ರವರು ತಮ್ಮ ಬಳಿ ರೂ.650/– ನಗದು ಇದೆ ಎಂತಲೂ ಘೋಷಿಸಿಕೊಂಡಿದ್ದರು. ಆ.ಸ.ನೌ–4 ಇವರು ತಮ್ಮ ಬಳಿ ಇದೆ ಎನ್ನುವ ಬಗ್ಗೆ ಘೋಷಿಸಿಕೊಂಡಿರಲಿಲ್ಲ ಅಂತಾ ನುಡಿದಿರುತ್ತಾರೆ.

19. ಮುಂದುವರೆದು ತಮ್ಮ ಸಾಕ್ಷಿಯಲ್ಲಿ ಆ.ಸ.ನೌ–1 ರಿಂದ 4 ಇವರ ದೈಹಿಕ ತಪಾಸಣೆಯನ್ನು ಮಾಡಲಾಗಿ ಆ.ಸ.ನೌ–1 ರವರ ಬಳಿಯಲ್ಲಿ ಘೋಷಿಸಿಕೊಂಡಿದ್ದಕ್ಕಿಂತ ಹೆಚ್ಚಿನ ನಗದು ಇರಲಿಲ್ಲ. ಆ.ಸ.ನೌ–2 ರವರ ಬಳಿಯಲ್ಲಿ ಅವರು ಘೋಷಿಸಿಕೊಂಡಿದ್ದ ಹಣ ಮತ್ತು ಅವರು ಮಲಗಿದ್ದ ಮಂಚದ ಪಕ್ಕದಲ್ಲಿ ಇದ್ದ ಮರದ ರ್‍ಯಾಕಿನಲ್ಲಿ ರೂ.1,080/– ಗಳಿದ್ದವು, ಆ.ಸ.ನೌ–3 ರವರ ಬಳಿಯಲ್ಲಿ ಅವರು ಘೋಷಿಸಿಕೊಂಡಿದ್ದ ಮೊತ್ತಕ್ಕಿಂತ ರೂ.165/–ಗಳ ಹೆಚ್ಚಿಗೆ ಹಣ ಇತ್ತು, ಬಲಭಾಗದಲ್ಲಿದ್ದಂತಹ ಟೇಬಲ್ ಡ್ರಾನಲ್ಲಿ ರೂ.1,100/– ಗಳಿದ್ದು, ಈ ಹಣದ ಬಗ್ಗೆ ಆ.ಸ.ನೌ–3 ರವರು ಸಮರ್ಪಕವಾದ ಉತ್ತರವನ್ನು ಕೊಡಲಿಲ್ಲ ಅಂತಾ ನುಡಿದಿರುತ್ತಾರೆ. ಆ.ಸ.ನೌ–4 ರವರ ಬಳಿಯಲ್ಲಿ ರೂ.2,120/– ಇತ್ತು, ಒಟ್ಟು ರೂ.4,450/– ಗಳನ್ನು ಅಮಾನತ್ತುಪಡಿಸಿಕೊಂಡು ಈ ಬಗ್ಗೆ ಪಂಚನಾಮೆಯನ್ನು ಮಾಡಿರುತ್ತಾರೆ ಅಂತಾ ನುಡಿದಿರುತ್ತಾರೆ.

20.ಆ.ಸ.ನೌ–3 ಶ್ರೀ. ಡಿ.ಎಂ ಮಲ್ಲಿಕಾರ್ಜುನ ಸ್ವಾಮಿ ರವರು ತಮ್ಮನ್ನು ಡಿ.ಡಬ್ಲ್ಯೂ.1 ಎಂದು ಸಾಕ್ಷಿ ನುಡಿದಿದ್ದು, ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ/ಪ್ರಮಾಣ ಪತ್ರದಲ್ಲಿ ಲೋಕಾಯುಕ್ತ ಪೋಲಿಸರು ದಾಳಿ ಮಾಡಿದಾಗ ತಮ್ಮ ಬಳಿ ಇದ್ದ ರೂ.165/– ಗಳ ಬಗ್ಗೆ ವಿವರಣೆ ನೀಡಿದ್ದು, ಸದರಿ ಹಣವನ್ನು ತನಗೆ ಪರಿಚಯ ಇರುವ ಒಬ್ಬ ವ್ಯಕ್ತಿಯು ತನ್ನ ಕಡೆಯಿಂದ ಈ ಮೊದಲು ಹಣವನ್ನು ಪಡೆದುಕೊಂಡಿದ್ದು, ಸದರಿ ಹಣವನ್ನು ಲೋಕಾಯುಕ್ತ ಪೋಲಿಸರು ದಾಳಿ ಮಾಡುವ ಹಿಂದಿನ ದಿನ ತಾನು ಮೈಸೂರಿನಿಂದ ವಿರಾಜಪೇಟೆಗೆ ಪ್ರಯಾಣಿಸುತ್ತಿದ್ದಾಗ ಹಣ ತೆಗೆದುಕೊಂಡ ವ್ಯಕ್ತಿ ಭೇಟಿಯಾಗಿದ್ದು, ತಾನು ಪಡೆದುಕೊಂಡ ಹಣ ರೂ.165/– ಗಳನ್ನು ತನಗೆ ಮರಳಿ ಕೊಟ್ಟಿರುತ್ತಾರೆ ಆದರೆ ಈ ಬಗ್ಗೆ ತಾನು ನಗದು ಪುಸ್ತಕದಲ್ಲಿ ತಣ್ತಿಪ್ಪಿನಿಂದ ನಮೂದಿಸಿರುವುದಿಲ್ಲ ಅಂತಾ ನುಡಿದಿರುತ್ತಾರೆ. ಅಲ್ಲದೇ ರೂ.1,100/– ಗಳನ್ನು ಟೇಬಲ್ ಡ್ರಾನಲ್ಲಿದ್ದು ಈ ಬಗ್ಗೆಯೂ ಸಹ ತಾನು ಲೋಕಾಯುಕ್ತ ಪೋಲಿಸರಿಗೆ ವಿವರಣೆ ನೀಡಿದ್ದು, ಇವರ ಕಛೇರಿಯು (ಚೆಕ್ ಪೋಸ್ಟ್) ಅರಣ್ಯ ಮಧ್ಯದಲ್ಲಿದ್ದು ಮತ್ತು ಯಾವುದೇ ವಾಣಿಜ್ಯ ಮಳಿಗೆಗಳು ಇರದ ಕಾರಣ ವಾಹನದ ಚಾಲಕರು ದಂಡವನ್ನು ಪಾವತಿಸಿದಾಗ ಅವರಿಗೆ ಮರಳಿ ಚಿಲ್ಲರೆ ಹಣ ಕೊಡುವುದಕ್ಕೆ ತೊಂದರೆ ಆಗುತ್ತದೆ ಅಂತಾ ಸಾಮಾನ್ಯವಾಗಿ ಡ್ರಾ ನಲ್ಲಿ ಹಣ ಇಡುತ್ತಿದ್ದೆವು ಅಂತಾ ನುಡಿದಿರುತ್ತಾರೆ. ಆದ್ದರಿಂದ ತಾನು ಯಾವುದೇ ಕರ್ತವ್ಯ ಲೋಪ ಎಸಗಿರುವುದಿಲ್ಲ ಅಂತಾ ನುಡಿದಿರುತ್ತಾರೆ.

21. ಆ.ಸ.ನೌ–4 ಶ್ರೀ. ಭಗವಾನ್ ರವರು ತಮ್ಮನ್ನು ಡಿ.ಡಬ್ಲ್ಯೂ.2 ಎಂದು ಸಾಕ್ಷಿ ನುಡಿದಿದ್ದು, ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ/ಪ್ರಮಾಣ ಪತ್ರದಲ್ಲಿ ಲೋಕಾಯುಕ್ತ ಪೋಲಿಸರು ತಪಾಸಣೆ ಮಾಡಿದಾಗ ತನ್ನ ಬಳಿ ಇದ್ದ ರೂ.2,120/– ಗಳನ್ನು ಜಪ್ತಿಪಡಿಸಿಕೊಂಡಿದ್ದು, ಈ ಬಗ್ಗೆ ತಾನು ಲೋಕಾಯುಕ್ತ ಪೋಲಿಸರಿಗೆ ವಿವರಣೆಯನ್ನು ನೀಡಿದ್ದು, ತನ್ನ ವಿವರಣೆಯಲ್ಲಿ ತಾನು ದಿನದ 24 ಗಂಟೆಯೂ ಕರ್ತವ್ಯ ನಿರ್ವಹಿಸುತ್ತಿರುವುದರಿಂದ ಮತ್ತು ತಮ್ಮ ಕಛೇರಿಯು ಅರಣ್ಯದ ಮಧ್ಯದಲ್ಲಿರುವುದರಿಂದ ಬಹಳ ಹೊತ್ತಿನವರೆಗೆ ಕೆಲಸ ಮಾಡಬೇಕಾಗಿರುವುದರಿಂದ ತನ್ನ ಸ್ವಂತ ಖರ್ಚಿಗಾಗಿ ಅಂದರೆ ಆಹಾರ, ಪ್ರಯಾಣ ಮತ್ತು ಇತರೆ ತುರ್ತು ಕೆಲಸಕ್ಕಾಗಿ ಹಾಗೂ

ಜೇನುತುಪ್ಪವನ್ನು ಖರೀದಿಸಲು ಇಟ್ಟುಕೊಂಡಿದ್ದೆ ಅಂತಾ ಹೇಳಿರುತ್ತೇನೆ ಅಂತಾ ನುಡಿದಿರುತ್ತಾರೆ. ಆದ್ದರಿಂದ ತಾನು ಯಾವುದೇ ಕರ್ತವ್ಯ ಲೋಪ ಎಸಗಿರುವುದಿಲ್ಲ ಅಂತಾ ನುಡಿದಿರುತ್ತಾರೆ.

22.ಈ ವಿಚಾರಣೆಯಲ್ಲಿ ಆ.ಸ.ನೌ–1 ರಿಂದ 4 ಇವರು ಲೋಕಾಯುಕ್ತ ಪೋಲಿಸರು ತಮ್ಮ ಕಛೇರಿಯ ಮೇಲೆ ದಿನಾಂಕ: 17/06/2014 ರಂದು ದಾಳಿ ಮಾಡಿದ ಬಗ್ಗೆ ಒಪ್ಪಿಕೊಂಡಿರುತ್ತಾರೆ ಮತ್ತು ಲೋಕಾಯುಕ್ತ ಪೋಲಿಸರು ಹಣವನ್ನು ಜಪ್ತಿ ಮಾಡಿದ ಬಗ್ಗೆಯೂ ಸಹ ಒಪ್ಪಿಕೊಂಡಿರುತ್ತಾರೆ. ಆದರೆ ಸದರಿ ಹಣ ತಮ್ಮ ಲಿಖಿತ ಹೇಳಿಕೆಯಲ್ಲಿ ಹೇಳಿದಂತೆ ವಿವರಣೆ ನೀಡಿರುತ್ತೇವೆ ಅಂತಾ ಹೇಳಿರುತ್ತಾರೆ. ಪಿ.ಡಬ್ಲ್ಯೂ.1 ಇವರ ಪಾಟಿಸವಾಲಿನಲ್ಲಿ ಆ.ಸ.ನೌ–2 ಇವರ ಬಳಿ ವೈಯಕ್ತಿಕ ಸ್ವಾಧೀನದಲ್ಲಿ ಹಣ ಇರಲಿಲ್ಲ ಎಂದು ಒಪ್ಪಿಕೊಂಡಿದ್ದು, ರೂ.1,080/– ಇವರ ಹತ್ತಿರ ಇರುವ ರ್‍ಯಾಕಿನಲ್ಲಿ ಇದ್ದವು ಅಂತಾ ಹೇಳಿರುತ್ತಾರೆ. ಆ.ಸ.ನೌ–2 ಇವರು ತಮ್ಮ ಲಿಖಿತ ಹೇಳಿಕೆಯಲ್ಲಿ ಆ ದಿವಸ ತನ್ನ ಬಳಿ ಇದ್ದ ರೂ.3,850/–ಗಳನ್ನು ಅಧಿಕೃತವಾಗಿ ಘೋಷಣೆ ಮಾಡಿಕೊಂಡಿದ್ದು, ತನ್ನ ಹತ್ತಿರ ರೂ.3,250/– ಗಳಿದ್ದು, ಲೋಕಾಯುಕ್ತ ಪೋಲಿಸರು ತನ್ನ ಬಳಿಯಿಂದ ಹೆಚ್ಚಿನ ಹಣವನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ ಅಂತಾ ಹೇಳಿರುತ್ತಾರೆ. ಈ ಪ್ರಕರಣದಲ್ಲಿ ನಗದು ಪುಸ್ತಕವನ್ನು ನಿ.ಪಿ.8 ಅಂತಾ ಗುರುತಿಸಲಾಗಿದ್ದು, ಅದರಲ್ಲಿ ದಿನಾಂಕ: 16/06/2014 ರಂದು ಆ.ಸ.ನೌ–2 ಇವರ ಬಳಿಯಲ್ಲಿ ಘೋಷಿಸಿಕೊಂಡಿದ್ದ ಹಣ ರೂ.3,850/– ಅಂತಾ ನಮೂದು ಇರುತ್ತದೆ. ಅದರಂತೆ ಇವರ ಪಾಟಿಸವಾಲಿನಲ್ಲಿ ಆ.ಸ.ನೌ–2 ಇವರು ರ್‍ಯಾಕಿನಲ್ಲಿ ಇದ್ದಂತಹ ಹಣಕ್ಕೂ ಮತ್ತು ತನಗೂ ಯಾವುದೇ ಸಂಬಂಧ ಇರುವುದಿಲ್ಲ ಅಂತಾ ಸಮಜಾಯಿಷಿ ನೀಡಿರುತ್ತಾರೆ ಅಂತಾ ಮಾಡಿದ ಸಲಹೆಗೆ ಸಾಕ್ಷಿಯು ಅದು ನನ್ನದು ಇರುವುದಿಲ್ಲ ಅಂತಾ ಹೇಳಿರುತ್ತಾರೆ ಅಂತಾ ನುಡಿದಿರುತ್ತಾರೆ. ದೋಷಾರೋಪಣಾ ಪಟ್ಟಿಯಲ್ಲಿ ರೂ.1,080/–ಗೆ ಸಂಬಂಧಪಟ್ಟಂತೆ ಆ.ಸ.ನೌ–1 ರಿಂದ 4 ಇವರು ಕರ್ತವ್ಯ ಲೋಪ ಎಸಗಿರುತ್ತಾರೆ ಅಂತಾ ಆಪಾದಿಸಲಾಗಿದ್ದು, ಪಿ.ಡಬ್ಲ್ಯೂ.1 ಇವರು ತಮ್ಮ ಸಾಕ್ಷಿಯಲ್ಲಿ ರೂ.1,080/– ಗಳು ಆ.ಸ.ನೌ–2 ಸಮೀಪ ದೊರೆತ ಹಣ ಅಂತಾ ನುಡಿದಿರುತ್ತಾರೆ. ಈ ಹಣದ ಬಗ್ಗೆ ಉಳಿದ ಆ.ಸ.ನೌರವರುಗಳು ಮಾಹಿತಿ ಇತ್ತು ಅಥವಾ ಇಲ್ಲವೇ ಎನ್ನುವ ಬಗ್ಗೆ ಪಿ.ಡಬ್ಲ್ಯೂ.1 ಇವರು ಸಾಕ್ಷಿ ನುಡಿದಿರುವುದಿಲ್ಲ.

ಆ.ಸ.ನೌ–2 ಇವರ ಬಳಿ ತಾವು ಘೋಷಿಸಿಕೊಂಡ ಹಣಕ್ಕಿಂತ ಹೆಚ್ಚಿಗೆ ಇತ್ತು ಎನ್ನುವ ಬಗ್ಗೆ ಪಿ.ಡಬ್ಲ್ಯೂ.1 ಇವರು ಸಾಕ್ಷಿ ನುಡಿದಿರುವುದಿಲ್ಲ. ಕೇವಲ ರ್‍ಯಾಕಿನಲ್ಲಿ ರೂ.1,080/– ಗಳು ದೊರೆಕಿರುತ್ತವೆ ಎಂದ ಮಾತ್ರಕ್ಕೆ ನನ್ನ ಅಭಿಪ್ರಾಯದಲ್ಲಿ ಎಲ್ಲರೂ ಜವಾಬ್ದಾರಿ ಆಗುವುದಿಲ್ಲ. ಆದ್ದರಿಂದ, ಅಂಶ–1 [2(ಎ)] ಅನ್ನು ಮಂಡನಾಧಿಕಾರಿಗಳು ಶಿಸ್ತು ಪ್ರಾಧಿಕಾರದ ಪರವಾಗಿ ರುಜುವಾತುಪಡಿಸಿರುವುದಿಲ್ಲ.

23.ಅಂಶ–2 [2(ಬಿ ಮತ್ತು ಸಿ)] ಪಿ.ಡಬ್ಲ್ಯೂ.1 ಇವರ ಪಾಟಿಸವಾಲಿನಲ್ಲಿ ಆ.ಸ.ನೌ–3 ಇವರು ರೂ.165/– ಗಳನ್ನು ತನ್ನ ಸ್ನೇಹಿತರು ಕೊಟ್ಟಿರುತ್ತಾರೆ ಅಂತಾ ತಿಳಿಸಿರುತ್ತಾರೆ ಅಂತಾ ಮಾಡಿದ ಸಲಹೆಗೆ ಸಾಕ್ಷಿಯು ಆ.ಸ.ನೌ–3 ಇವರು ಸ್ನೇಹಿತನ ವಿವರವನ್ನು ಕೊಡಲು ವಿಫಲರಾಗಿದ್ದರು ಅಂತಾ ನುಡಿದಿರುತ್ತಾರೆ. ಆ.ಸ.ನೌ–3 (ಡಿ.ಡಬ್ಲ್ಯೂ.1) ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ರೂ.165/– ಗಳನ್ನು ತನಗೆ ಪರಿಚಯದವರು ಕೊಟ್ಟಿರುತ್ತಾರೆ ಅಂತಾ ಮಾತ್ರ ಹೇಳಿದ್ದು ಆದರೆ ಆ ವ್ಯಕ್ತಿ ಯಾರು ಇದ್ದರು ಮತ್ತು ಅವರ ಹೆಸರು ಏನು ಇತ್ತು ಎನ್ನುವುದರ ಬಗ್ಗೆ ವಿವರಣೆಯನ್ನು ನೀಡಿರುವುದಿಲ್ಲ. ಅಲ್ಲದೇ ಇವರ ಡ್ರಾ ನಲ್ಲಿ ರೂ.1,100/– ಗಳ ಹಣ ದೊರೆತಿದ್ದು, ಸದರಿ ಹಣವನ್ನು ಚಿಲ್ಲರೆ ಖರ್ಚಿಗಾಗಿ ಇಟ್ಟುಕೊಂಡಿರುತ್ತೇನೆ ಅಂತಾ ಹೇಳಿದ್ದು, ಆದರೆ ಸದರಿ ಚಿಲ್ಲರೆ ಹಣದ ಬಗ್ಗೆ ನಗದು ಪುಸ್ತಕದಲ್ಲಿ ನಮೂದು ಮಾಡುವುದಕ್ಕೆ ಇವರಿಗೆ ಯಾವುದೇ ತೊಂದರೆ ಇರಲಿಲ್ಲ ಅಂತಾ ಕಂಡುಬರುತ್ತದೆ. ಆದ್ದರಿಂದ ಇವರು ಹೇಳಿದ ವಿವರಣೆ ನನ್ನ ಅಭಿಪ್ರಾಯದಲ್ಲಿ ಒಪ್ಪಲು ಸಾಧ್ಯವಿರುವುದಿಲ್ಲ. ನಿ.ಪಿ.8ರಲ್ಲಿ ಇವರು ಘೋಷಿಸಿಕೊಂಡಿದ್ದ ಹಣ ರೂ.650/– ಅಂತಾ ಇದ್ದು, ಈ ಹೆಚ್ಚಿನ ಹಣದ ಬಗ್ಗೆ ಸಮಂಜಸವಾದ ಉತ್ತರವನ್ನು ನೀಡಿರುವುದಿಲ್ಲ. ಆದ್ದರಿಂದ, ಆದ್ದರಿಂದ, ಮಂಡನಾಧಿಕಾರಿಗಳು ಶಿಸ್ತು ಪ್ರಾಧಿಕಾರದ ಪರವಾಗಿ ಆ.ಸ.ನೌ–3 ಇವರ ವಿರುದ್ಧ ಸಕಾರಾತ್ಮಕವಾಗಿ ರುಜುವಾತುಪಡಿಸಿರುತ್ತಾರೆ.

24.ಅಂಶ–3 [2(ಡಿ)] ಆ.ಸ.ನೌ–4 (ಡಿ.ಡಬ್ಲ್ಯೂ.2) ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ತನ್ನ ಬಳಿ ರೂ.2,120/– ಗಳು ದೊರಕಿರುತ್ತವೆ ಅಂತಾ ಹೇಳಿದ್ದು, ನಿ.ಪಿ.8ರ ಪ್ರಕಾರ ಸದರಿ ಹಣ ತನ್ನ

B

ಹತ್ತಿರ ಇದ್ದ ಬಗ್ಗೆ ನಗದು ಪುಸ್ತಕದಲ್ಲಿ ಘೋಷಿಸಿಕೊಂಡಿರುವುದಿಲ್ಲ. ಈ ವಿಷಯವನ್ನು ಆ.ಸ.ನೌ–4 ರವರು ಒಪ್ಪಿಕೊಂಡಿದ್ದು, ಆದರೆ ತಾನು ದಿನದ 24 ಗಂಟೆಯೂ ಕೆಲಸ ಮಾಡುತ್ತಿದ್ದರಿಂದ ಮತ್ತು ತಮ್ಮ ಕಛೇರಿಯು ಅರಣ್ಯದ ಮಧ್ಯದಲ್ಲಿರುವುದರಿಂದ ಬಹಳ ಹೊತ್ತಿನವರೆಗೆ ಕೆಲಸ ಮಾಡಬೇಕಾಗಿರುವುದರಿಂದ ತನ್ನ ಸ್ವಂತ ಖರ್ಚಿಗಾಗಿ ಅಂದರೆ ಆಹಾರ, ಪ್ರಯಾಣ ಮತ್ತು ಇತರೆ ತುರ್ತು ಕೆಲಸಕ್ಕಾಗಿ ಹಾಗೂ ಜೇನುತುಪ್ಪವನ್ನು ಖರೀದಿಸಲು ಇಟ್ಟುಕೊಂಡಿದ್ದೇ ಅಂತಾ ಹೇಳಿರುತ್ತೇನೆ ಅಂತಾ ನುಡಿದಿರುತ್ತಾರೆ. ಆದರೆ ಸದರಿ ಹಣದ ಬಗ್ಗೆ ನಗದು ಪುಸ್ತಕದಲ್ಲಿ ಬರೆಯಲು ನನ್ನ ಅಭಿಪ್ರಾಯದಲ್ಲಿ ಇವರಿಗೆ ಯಾವುದೇ ತೊಂದರೆ ಇರಲಿಲ್ಲ ಅಂತಾ ಕಂಡುಬರುತ್ತದೆ. ನನ್ನ ಅಭಿಪ್ರಾಯದಲ್ಲಿ ಇವರು ನೀಡಿದ ವಿವರಣೆ ಒಪ್ಪಿಕೊಳ್ಳಲು ಬರುವುದಿಲ್ಲ. ಆದ್ದರಿಂದ, ಮಂಡನಾಧಿಕಾರಿಗಳು ಶಿಸ್ತು ಪ್ರಾಧಿಕಾರದ ಪರವಾಗಿ ಆ.ಸ.ನೌ–4 ಇವರ ವಿರುದ್ಧ ಸಕಾರಾತ್ಮಕವಾಗಿ ರುಜುವಾತುಪಡಿಸಿರುತ್ತಾರೆ.

25. ಅಂಶ–4 [2(ಇ)] ಮೇಲೆ ಚರ್ಚಿಸಿದಂತೆ ಮಂಡನಾಧಿಕಾರಿಗಳು ಶಿಸ್ತು ಪ್ರಾಧಿಕಾರದ ಪರವಾಗಿ ಆ.ಸ.ನೌ–3 ಮತ್ತು 4 ಇವರು ತಮ್ಮ ಬಳಿ ಇದ್ದ ಹಣದ ಬಗ್ಗೆ ಸಮಂಜಸವಾಗಿ ಉತ್ತರ ನೀಡದ ಕಾರಣ ಸದರಿ ಹಣವು ಆ.ಸ.ನೌ–3 ಮತ್ತು 4 ಇವರು ವಾಹನದ ಮಾಲೀಕರಿಂದ ಮತ್ತು ಚಾಲಕರಿಂದ ಲಂಚದ ರೂಪದಲ್ಲಿ ಪಡೆದುಕೊಂಡಿದ್ದು ಇರುತ್ತದೆ ಅಂತಾ ರುಜುವಾತುಪಡಿಸಿರುತ್ತಾರೆ. ಆದರೆ ಆ.ಸ.ನೌ–1 ಮತ್ತು 2 ಇವರ ವಿರುದ್ಧ ರುಜುವಾತುಪಡಿಸಿರುವುದಿಲ್ಲ. ಆದ್ದರಿಂದ, ಅಂಶ–4ನ್ನು ಭಾಗಶಃ ಸಕಾರಾತ್ಮಕವಾಗಿ ಉತ್ತರಿಸುತ್ತೇನೆ.

26. ಈ ಮೇಲ್ಕಂಡ ಕಾರಣಗಳು ಮತ್ತು ಚರ್ಚೆಯಿಂದಾಗಿ, ಆ.ಸ.ನೌ–3 ಮತ್ತು 4 ರವರ ವಿರುದ್ಧ ಆಪಾದಿಸಲಾದ ಆರೋಪಗಳನ್ನು ವಿಚಾರಣಾ ಪ್ರಾಧಿಕಾರವು ರುಜುವಾತುಪಡಿಸುವಲ್ಲಿ ಸಫಲವಾಗಿರುತ್ತದೆ. ಆ.ಸ.ನೌ–1 ಮತ್ತು 2 ರವರ ವಿರುದ್ಧ ಆಪಾದಿಸಲಾದ ಆರೋಪಗಳನ್ನು ವಿಚಾರಣಾ ಪ್ರಾಧಿಕಾರವು ರುಜುವಾತುಪಡಿಸುವಲ್ಲಿ ವಿಫಲವಾಗಿರುತ್ತದೆ ಎಂದು ಉತ್ತರಿಸಿರುತ್ತೇನೆ.

27.**ಅಂಶ-5: ಈ ಮೇಲ್ಕಂಡ ಕಾರಣಗಳಿಗಾಗಿ, ಈ ಕೆಳಕಂಡಂತೆ ನಿರ್ಣಯಿಸಲಾಗಿದೆ.**

## ನಿರ್ಣಯ

ಆ.ಸ.ನೌಕರ (1) ಶ್ರೀ. ಎಂ ನಂಜುಂಡಸ್ವಾಮಿ, ವಾಣಿಜ್ಯ ತೆರಿಗೆ ಅಧಿಕಾರಿಗಳು, ವಾಣಿಜ್ಯ ತೆರಿಗೆ ತನಿಖಾ ಠಾಣೆ, ಪೆರಂಬಾಡಿ, ವಿರಾಜಪೇಟೆ ತಾಲ್ಲೂಕು, ಕೊಡಗು ಜಿಲ್ಲೆ (2) ಶ್ರೀ. ಹೆಚ್.ಎಸ್ ಬಸವೇಗೌಡ, ವಾಣಿಜ್ಯ ತೆರಿಗೆ ಪರಿವೀಕ್ಷಕರು, ವಾಣಿಜ್ಯ ತೆರಿಗೆ ತನಿಖಾ ಠಾಣೆ, ಪೆರಂಬಾಡಿ, ವಿರಾಜಪೇಟೆ ತಾಲ್ಲೂಕು, ಕೊಡಗು ಜಿಲ್ಲೆ ಇವರುಗಳ ವಿರುದ್ಧ ಆಪಾದಿಸಲಾದ ಆರೋಪಗಳನ್ನು ರುಜುವಾತುಪಡಿಸಲು ಶಿಸ್ತುಪ್ರಾಧಿಕಾರವು ವಿಫಲವಾಗಿರುತ್ತದೆ ಎಂದು ನಿರ್ಣಯಿಸಲಾಗಿದೆ.

(3) ಶ್ರೀ. ಡಿ.ಎಂ ಮಲ್ಲಿಕಾರ್ಜುನಸ್ವಾಮಿ, ದ್ವಿತೀಯ ದರ್ಜೆ ಸಹಾಯಕರು, ವಾಣಿಜ್ಯ ತೆರಿಗೆ ತನಿಖಾ ಠಾಣೆ, ಪೆರಂಬಾಡಿ, ವಿರಾಜಪೇಟೆ ತಾಲ್ಲೂಕು, ಕೊಡಗು ಜಿಲ್ಲೆ ಮತ್ತು (4) ಶ್ರೀ. ಭಗವಾನ್, ಡಿ ಗ್ರೂಪ್ ನೌಕರ, ವಾಣಿಜ್ಯ ತೆರಿಗೆ ತನಿಖಾ ಠಾಣೆ, ಪೆರಂಬಾಡಿ, ವಿರಾಜಪೇಟೆ ತಾಲ್ಲೂಕು, ಕೊಡಗು ಜಿಲ್ಲೆ ಇವರುಗಳ ವಿರುದ್ಧ ಆಪಾದಿಸಲಾದ ಆರೋಪಗಳನ್ನು ರುಜುವಾತುಪಡಿಸಲು ಶಿಸ್ತುಪ್ರಾಧಿಕಾರವು ಸಫಲವಾಗಿರುತ್ತದೆ ಎಂದು ನಿರ್ಣಯಿಸಲಾಗಿದೆ.

ಆ.ಸ.ನೌ–1 ರವರ ನಿವೃತ್ತಿ ದಿನಾಂಕ: 31/05/2015; ಆ.ಸ.ನೌ–2 ರವರ ನಿವೃತ್ತಿ ದಿನಾಂಕ: 30/06/2019; ಆ.ಸ.ನೌ–3 ರವರ ನಿವೃತ್ತಿ ದಿನಾಂಕ: 31/07/2022 ಮತ್ತು ಆ.ಸ.ನೌ–4 ರವರ ನಿವೃತ್ತಿ ದಿನಾಂಕ: 31/05/2018 ಆಗಿರುತ್ತದೆ.

ಈ ವರದಿಯನ್ನು ಮಾನ್ಯ ಉಪಲೋಕಾಯುಕ್ತ ರವರಿಗೆ ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸುವಂತೆ ಕಛೇರಿಗೆ ಆದೇಶಿಸಲಾಗಿದೆ.

Pardessi 29/8/22

**(ಸುದೇಶ್ ರಾಜಾರಾಮ್ ಪರದೇಶಿ)**
ಅಪರ ನಿಬಂಧಕರು ವಿಚಾರಣೆಗಳು–14,
ಕರ್ನಾಟಕ ಲೋಕಾಯುಕ್ತ,
ಬೆಂಗಳೂರು.

# ANNEXURES

| Sl. No. | Particulars of Documents | |
|---|---|---|
| 1 | **Witness examined on behalf of the Disciplinary Authority** | |
| | **PW-1** | Sri. Parashuram B S/o Late Bettegowda, PI, Mandya. |
| | **PW-2** | Sri. K.K Krishnamurthy S/o K.V Krishnappa, Dy. Tahasildar, Hassan. |
| 2 | **Documents marked on behalf of the Disciplinary Authority Ex.P-1 to Ex.P-13** | |
| | **Ex.P.1 & 1(a)** | Letter dtd: 11/06/2014 submitted SP, KLA, Mysuru with signature. |
| | **Ex.P.2** | Letter dtd: 11/06/2014 addrssed by SP, KLA, Mysuru. |
| | **Ex.P.3** | FIR. |
| | **Ex.P.4** | Warrant issued by Dist. & Sessions Judge, Kodagu, Madikeri. |
| | **Ex.P.5, 5(a) & 5(b)** | Search Mahazar with signatures. |
| | **Ex.P.6** | Copy of photographs. |
| | **Ex.P.7 & 7(a)** | Sketch map with signature. |
| | **Ex.P.8** | Documents. |
| | **Ex.P.9** | Statement of DGO-1 to 4. |
| | **Ex.P. 10, 10** | Mahazar with signatures. |

| | | |
|---|---|---|
| | (a) & 10 (b) | |
| | **Ex.P. 11** | Letter dtd: 03/07/2014 addressed to Joint Commissioner, Commercial Tax Dept., Mysuru with enclosues. |
| | **Ex.P. 12** | Letter dtd: 03/07/2014 addressed to Joint Commissioner, Commercial Tax Dept., Mysuru with enclosures. |
| | **Ex.P. 13** | Sketch map. |
| 3 | **Witness examined on behalf of the DGO, Documents marked on behalf of the DGO** | |
| | **DW-1** | Sri. D.M Mallikarjunaswamy S/o Late Doddamallaiah, SDA, o/o Joint Commissioner, Commercial Tax Dept., Mysuru. |
| | **DW-2** | Sri. Bhagawan S/o Ramaiah, Rtd. Group 'D' Employee, o/o Joint Commissioner, Commercial Tax Dept., Mysuru. |

Dated this the 29th August, 2022

Sd/- 29/8/22

**(SUDESH RAJARAM PARADESHI)**
Additional Registrar Enquiries-14,
Karnataka Lokayukta,
Bangalore.